**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 23/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.03**

**ದಿನಾಂಕಃ 24.12.2025** **ಸಿಡಬ್ಲ್ಯೂ.04**

| | |
|---|---|
| ಹೆಸರು | ಸುನಿತಾ |
| ತಂದೆ ಹೆಸರು | ಶ್ರಿಕಾಂತ |
| ವಯಸ್ಸು | 43 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 1 ನನ್ನ ಮಗ. ಚಾಸಾ. 2 ಮತ್ತು 3 ರವರ ಪರಿಚಯವಿಲ್ಲ. ಚಾಸಾ.5 ನನ್ನ ಅಕ್ಕನ ಮಗ. ಚಾಸಾ.6 ನನ್ನ ಮಗಳು. ಚಾಸಾ.7 ರವರ ಪರಿಚಯವಿಲ್ಲ. ಚಾಸಾ.8 ನನ್ನ ಗಂಡ. ದಿಃ 04.11.2024 ರಂದು ಬೆಳಿಗ್ಗೆ ಬೆಂಗಳೂರಿನಿಂದ ರಾಣೆಬೆನ್ನೂರಿಗೆ ನಾವು ನಮ್ಮ ಸ್ವಿಫ್ಟ ಕಾರ ನಂ. ಕೆಎ02 ಎಂ ಕೆ 1722 ನಲ್ಲಿ ನಾನು, ಚಾಸಾ.1 ಮತ್ತು ಚಾಸಾ.6 ರವರು ಹೊರಟಿದ್ದೆವು. ರಾಣೆಬೆನ್ನೂರಿನಿಂದ ಕದರಮಂಡಲಗಿ ದೇವಸ್ಥಾನಕ್ಕೆ ಹೋಗಿ ಮರಳಿ ಅದೇಕಾರಿನಲ್ಲಿ ನಾನು, ಚಾಸಾ.1 , 5 ಮತ್ತು 6 ರವರು ಬರುತ್ತಿರುವಾಗ ಸಂಜೆ 4.45 ಗಂಟೆಗೆ ಹರಗನಹಳ್ಳಿಬ್ರಿಡ್ಜ ಹತ್ತಿರ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ವೇಗವಾಗಿ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿತು. ಆಗ ಕಾರಿನಲಿದ್ದ ನಮ್ಮ 4 ಜನಕ್ಕೆ ಪೆಟ್ಟಾಯಿತು. ಸ್ಥಳದಲ್ಲಿ ಇದ್ದವರು ಅಂಬುಲೆನ್ಸಗೆ ಕರೆ ಮಾಡಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನನಗೆ ತಲೆಗೆ ಮೂಗಿಗೆ ಮತ್ತು ಕಾಲಿಗೆ ಪೆಟ್ಟಾಯಿತು, ಚಾಸಾ.1 ರವರಿಗೆ ತಲೆಗೆ ಪೆಟ್ಟಾಯಿತು. ಚಾಸಾ.6 ರವರಿಗೆ ಕಾಲು ಮುರಿದಿತ್ತು. ಚಾಸಾ.5 ರವರಿಗೆ ತುಂಬಾ ಪೆಟ್ಟಾಗಿತ್ತು. ಚಾಸಾ.5 ರವರಿಗೆ ಪ್ರಜ್ಞೆ ಇರಲಿಲ್ಲ. ನಮಗೆ ಅಪಘಾತ ಪಡಿಸಿದ ಬಸ್ ನಂಬರ್ ನನಗೆ ನೆನಪಿಲ್ಲ. ಬಸ್ ಚಾಲಕನ ಹೆಸರು ಕಲ್ಮೇಶ. ಅದೇ ದಿನ ಚಾಸಾ.1 ಠಾಣೆಗೆ ಹೋಗಿ ಬಸ್ ಚಾಲಕನ ವಿರುದ್ದ ದೂರು ನೀಡಿರುತ್ತಾರೆ. ಬಸ್ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಬಸ್ ಚಾಲಕ ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಪಿ ವಕೀಲರಿಂದಃ**

ನಾವು ಬರುತ್ತಿದ್ದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದೇ ಬಾರಿಗೆ 3 ವಾಹನಗಳು ಸರಾಗವಾಗಿ ಚಲಿಸಬಹುದು ಎಂದರೆ ಸರಿ. ಇದೇ ರಸ್ತೆ ರಾಜನಹಳ್ಳಿಬ್ರಿಡ್ಜ ನಿಂದ

ದ್ವಿಮುಖ ರಸ್ತೆ ಇದೆ ಎಂದರೆ ಸರಿ. ತ್ರಿಮುಖ ರಸ್ತೆಯಿಂದ ದ್ವಿಮುಖ ರಸ್ತೆ ಆಗುವ ಕಾರಣ ಸಾಮಾನ್ಯವಾಗಿ ಅಲ್ಲಿ ಟ್ರಾಫಿಕ್ ಆಗುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಈ ರೀತಿ ರಸ್ತೆ ಬದಲಾಗುವ ಬಗ್ಗೆ ಯಾವುದೇ ಸೂಚನಾ ಫಲಕಗಳು ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಸೇತುವೆಗಳಿಗೆ ಮತ್ತು ರಸ್ತೆಗಳಿಗೆ ನಡುವೆ ಮಧ್ಯ ಬಿಡುವು ಇರುತ್ತದೆ ಎಂದರೆ ಸರಿ. ಅಂತಹ ಸಂದರ್ಭದಲ್ಲಿ ಕಾರುಗಳು ಸಾಮಾನ್ಯವಾಗಿ ಜಂಪ್ ಆಗುವ ಸಾಧ್ಯತೆ ಇರುತ್ತವೆ ಎಂದರೆ ಸರಿ. ನಿಪಿ.4 ರಲ್ಲಿ ಕಾಣುವ ರಸ್ತೆ ಕೆಟ್ಟು ಹೋಗಿದೆ ಎಂದರೆ ಸಾಕ್ಷಿಯು ಅಪಘಾತ ಅದರ ಪಕ್ಕದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ತಗ್ಗು ಇದ್ದುದರಿಂದ ಸಾಮಾನ್ಯವಾಗಿ ವಾಹನಗಳ ತಗ್ಗು ತಪ್ಪಿಸಲು ಬಲಬಾಗಕ್ಕೆ ಹೋಗುವುದು ರೂಡಿ ಎಂದರೆ ಸರಿ. ಸದರಿ ದಿನ ನಮ್ಮ ಮುಂದೆ ಇನ್ನೊಂದು ಕಾರು ಹೋಗುತ್ತಿತ್ತು ಎಂದರೆ ಸರಿ. ಸದರಿ ಕಾರು ನಿಪಿ.4 ರಲ್ಲಿ ಕಾಣುವ ತಗ್ಗನ್ನು ತಪ್ಪಿಸಿ ಬಲಬಾಗಕ್ಕೆ ಬಂದು ಮುಂದೆ ಹೋಗಿರುತ್ತಾರೆ ಎಂದರೆ ಸರಿ. ಸದರಿಯಾತ ಯಾವುದೇ ಸೂಚನೆಯನ್ನು ನೀಡದೇ ಈ ರೀತಿ ಮುಂದೆ ಹೋಗಿದ್ದರು ಎಂದರೆ ಸರಿ. ಅದೇ ಕಾರಿನ ಹಿಂದೆ ನಮ್ಮ ಕಾರು ಇತ್ತು ಎಂದರೆ ಸರಿ. ನನ್ನ ಮಗ ಚಾಸಾ1 ತಗ್ಗನ್ನು ತಪ್ಪಿಸಲು ಬಲಬಾಗಕ್ಕೆ ಬಂದರೂ ಸಹ ಯಾವುದೇ ಸೂಚನೆ ನೀಡದೇ ಬಂದಿರುತ್ತಾರೆ ಎಂದರೆ ಸಾಕ್ಷಿಯು ಬಲಬಾಗಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ಯಾವುದೇ ಸೂಚನೆ ನೀಡದೇ ಬಲಬಾಗಕ್ಕೆ ಬಂದಿದ್ದರಿಂದ ಆತನ ತಪ್ಪಿನಿಂದಾಗಿ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಆಂಬುಲೆನ್ಸ ನಂಬರ್ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಅಂಬುಲೆನ್ಸ ನ್ನು ಕರೆಸಿದವರ ಮತ್ತು ನಮ್ಮನ್ನು ಉಪಚರಿಸಿದವರ ಹೆಸರು ನನಗೆ ಗೊತ್ತಿಲ್ಲ. ದಿಃ 05.11.2024 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯ ಬ್ಯಾಡ್ಜ ನಂಬರ್ ನನಗೆ ಗೊತ್ತಿಲ್ಲ. ಚಾಸಾ.5 ರವರಿಗೆ ಪ್ರಜ್ಞೆ ಇರಲಿಲ್ಲ ಎಂಬುದನ್ನು ಆಸ್ಪತ್ರೆಯಲ್ಲಿ ಹೇಳಿ ಬರೆಸಿದ್ದೇನೆ. ಆಸ್ಪತ್ರೆಯಲಿ ಮಾಹಿತಿಯನ್ನು ನನ್ನ ಸಹೋದರ ಹೇಳಿ ಬರೆಸಿರುತ್ತಾರೆ. ನಿಮಗೆ ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಪೆಟ್ಟಾಗಿತ್ತು ಎಂದು ನುಡಿಯುತ್ತಾರೆ. ನಾನು ಚಿಕಿತ್ಸೆ ಪಡೆದಿರುತ್ತೇನೆ. ನಾನು ಯಾವುದೇ ಚಿಕಿತ್ಸೆ ಪಡೆಯದಿದ್ದರೂ ಸಹ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಪೆಟ್ಟು ಆಗಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಿ ಎಲ್ಲಿ ಪೆಟ್ಟು ಬಿದ್ದಿತ್ತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪರಿಹಾರಕ್ಕೊಸ್ಕರ ಅರ್ಜಿ ಸಲ್ಲಿಸಿಲ್ಲ. ಚಾಸಾ.1 ರವರ ತಪ್ಪಿನಿಂದ ಅಪಘಾತ ಸಂಬವಿಸಿದರೂ ಸಹ ಆರೋಪಿ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ